ಶಿವರಾವು ಎರಡು ನಿಮಿಷ ಅಕ್ಕನ ಮುಖ ನೋಡಿದ.

"ಹಂಗಾದ್ರೆ ನಾನಿನ್ನ ಹೋಗ್ತೀನಿ" ಎದ್ದ.

ಶಾಂತಿ ಇದ್ದು ಹೋಗು ಅಂತ ಬಲವಂತ ಮಾಡಲಿಲ್ಲ.

"ಇನ್ನ ಸ್ವಲ್ಪೊತ್ತು ಇರು" ಅಂದಳು.

ಶಿವರಾವು "ಹ್ಞೂಂ" ಅಂತಷ್ಟೇ ಅಂದ.

ಮಳೆ ನಿಂತಿತ್ತು. ಈಸುರುಗಾಳಿಯ ಜೋರು ಕಮ್ಮಿ ಆಗಿರಲಿಲ್ಲ.

"ದಿನಾ ರಾತ್ರಿ ನನಗ ನಿದ್ದೆ ಇಲ್ಲ. ನೀವಿಬ್ಬರೂ ನಮಗೊಂದು ದಾರಿ ತೋರಿಸದೆ ನಿಮ್ಮ ದಾರಿ ನೀವು ನೋಡ್ಕಂಡ್ರಿ. ರಾಘವನೂ ನಿಮ್ಮ ದಾರೇ ಹಿಡ್ಯದಿಲ್ಲ ಅಂತ ನಂಬಿಕೇನಾದ? ಒಂದೊಂದ್ಸಲ ಅವನ ಮಾತುಗಳು, ಕೈಗಳು ನೋಡ್ತಿದ್ರೆ ನಮಗೆ ಈ ಬದುಕು ಬದುಕೋ ಯೋಗ್ತೇನೂ ಇಲ್ದಂಗೆ ಮಾಡ್ತಾನೇನೋ ಅನ್ಸುತ್ತ. ಅವನು ಮನೆಯೊಳಗೆ ಇರುವಷ್ಟು ಹೊತ್ತು ನನಗೆ ನಿದ್ದೆ ಇರಲ್ಲ. ಎದ್ದೇ ಇರ್ತೀನಿ. ಅವನಿಲ್ದಾಗಲೇ ನನಗೆ ನಿದ್ದೆ."

ಶಿವರಾವುಗೆ ಸ್ವಲ್ಪ ಸ್ವಲ್ಪ ಅರ್ಥವಾಗ್ತಾ ಇದೆ.

"ದಿನಾ ರಾತ್ರಿ ರಾಘವ ಬರಾತನಕ ನಿದ್ದೆ ಮಾಡ್ತೀನಿ. ಇವತ್ತು ನನಗ ನಿದ್ದೆ ಇಲ್ಲ. ಯಾಕ ಗೊತ್ತಾ ಶಿವ? ಕಾರಣ ಹೇಳ್ತೀನಿ ಸಿಟ್ಟು ಮಾಡಿಕೊಬ್ಯಾಡ. ಮನುಷ್ಯರನ್ನು ಮನುಷ್ಯರೇ ಹರಕಂಡು ತಿನ್ನೋ ಕಾಲ ಇದು. ಈ ಡಬ್ಬಿಯೊಳಗೆ ನನ್ನ ಆರನೇ ಪ್ರಾಣ ಐತೆ."

"ಗೊತ್ತಕ್ಕಾ. ಹೇಳ್ಬ್ಯಾಡ. ನನ್ನ ಮ್ಯಾಲೆ ನಿನಗೆಷ್ಟು ಅಸಹ್ಯ ಐತೆಂತ ಗೊತ್ತಾಗಕತ್ಯಾದ" ಅವನ ಕಣ್ಣಲ್ಲಿ ನೀರು ತುಂಬಿಕೊಳ್ಳತೊಡಗಿದ್ದವು. ಮನೇನೆಲ್ಲ ಒಂದ್ಸಲ ಪರಿಶೀಲಿಸಿ ನೋಡಿದ. ಎಲ್ಲರೂ ನಿಶ್ಚಿಂತೆಯಾಗಿ ನಿದ್ದೆ ಮಾಡ್ತಿದ್ದರು.

"ಬರ್ತೀನಿ" ಅಂದ.

ಕದ ತೆಗೆದು ಕತ್ತಲಲ್ಲಿ ಕರಗಿ ಹೋಗುತ್ತಿರುವ ಶಿವರಾವುನನ್ನು ನೋಡುತ್ತ ಹುಚ್ಚಿಯಂತೆ ನಿಂತಿದ್ದಳು ಶಾಂತಿ.

## ಗುಮ್ಮಾ ಪ್ರಸನ್ನಕುಮಾರ್

ಎಂಬತ್ತರ ದಶಕದಲ್ಲಿ ಸಾಕಷ್ಟು ಕತೆಗಳನ್ನು ಬರೆದು ಪ್ರಕಟಿಸಿದ ತೆಲುಗು ಕತೆಗಾರ. ಅವರ 'ಪಿಲ್ಲಿ' ಕತೆ ತುಂಬಾ ಪ್ರಸಿದ್ಧವಾಗಿದೆ. ಮೂಲ ಗುಂಟೂರು ಪ್ರಾಂತ್ಯದವರು. ಹೈದರಾಬಾದಿನ ಎ.ಜಿ ಆಫೀಸಿನಲ್ಲಿ ಸೇವೆ ಸಲ್ಲಿಸಿ ನಿವೃತ್ತ ಜೀವನ ನಡೆಸುತ್ತಿದ್ದಾರೆ.

## ಚಿದಾನಂದ ಸಾಲಿ

ಕನ್ನಡದ ಮುಂಚೂಣಿಯ ಈ ಲೇಖಕ ರಾಯಚೂರಿನವರು. ಗಣಿತಶಾಸ್ತ್ರ, ಪತ್ರಿಕೋದ್ಯಮ, ಇಂಗ್ಲಿಷ್, ಶಿಕ್ಷಣಶಾಸ್ತ್ರ ಹಾಗೂ ಕನ್ನಡದಲ್ಲಿ ಸ್ನಾತಕೋತ್ತರ ಪದವೀಧರರು. ಕತೆ, ಕವಿತೆ, ಗಜಲ್, ನಾಟಕ, ಪ್ರಬಂಧ, ಸಂದರ್ಶನ, ಸಂಶೋಧನೆ, ಸಂಪಾದನೆ ಮತ್ತು ಅನುವಾದ ಪ್ರಕಾರಗಳಲ್ಲಿ ಈವರೆಗೆ 24 ಕೃತಿಗಳನ್ನು ರಚಿಸಿದ್ದಾರೆ.